ಮೂಲ ದಾವಾ ನಂಃ 106/2016

ಡಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ 13-10-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ.ಪಿ.ಹೆಚ್ ವಕೀಲರಿಂದಃ

ವಾದಿಯು ನನ್ನ ಅಣ್ಣ. ನನ್ನ ತಂದೆಯು ದಿನಾಂಕಃ 15.10.2013 ರಂದು ಮೃತರಾಗಿದ್ದಾರೆ. ನನ್ನ ತಾಯಿ ದಿನಾಂಕಃ 04.08.2016 ರಂದು ಮೃತರಾಗಿದ್ದಾರೆ. ನನ್ನ ತಂದೆ ಸಾಯುವಾಗ ಅವರಿಗೆ ಅಂದಾಜು 78 ವರ್ಷ ವಯಸ್ಸು ಆಗಿತ್ತು. ನನ್ನ ತಂದೆಯು ಸಾಯುವವರೆಗೂ ಅವರೇ ಮನೆಯ ಯಜಮಾನರಾಗಿದ್ದರು. ನನ್ನ ತಂದೆಗೆ 1996 ನೇ ಸಾಲಿನಿಂದ ಅವರು ಸಾಯುವವರೆಗೂ ಆರಾಮ ಇರಲಿಲ್ಲ. ನನ್ನ ತಂದೆಗೆ ಔಷಧ ಉಪಚಾರವನ್ನು ನಾನೇ ಮಾಡುತ್ತಿದ್ದೆನು. ಅವರು ಸಣ್ಣಪುಟ್ಟ ಕೆಲಸಕ್ಕೆ ಅಡ್ಡಾಡುತ್ತಿದ್ದರು, ಮತ್ತು ಸಣ್ಣಪುಟ್ಟ ವ್ಯಾಪಾರವನ್ನು ಮಾಡುತ್ತಿದ್ದರು. ಅವರಿಗೆ ಅರಾಮ ಇಲ್ಲದೇ ಇದ್ದಿದ್ದರಿಂದ ನಾನೇ ಮನೆ ಕೆಲಸವನ್ನು ನೋಡಿಕೊಳ್ಳುತ್ತಿದ್ದೆನು. ವ್ಯಾಪಾರ ಅಂದರೆ ಆಟಿಕೆ ಸಾಮಗ್ರಿಗಳನ್ನು ಮತ್ತು ಜನಿವಾರ ಇವುಗಳನ್ನು ಮಾರಾಟ ಮಾಡಲು ಹೋಗುತ್ತಿದ್ದರು. ನಾವು ಆ ವ್ಯಾಪಾರದಿಂದ ಒಂದು ದಿನಕ್ಕೆ ಅಂದಾಜು 500/- ರೂಪಾಯಿಗಳು ಉಳಿತಾಯ ಮಾಡುತ್ತಿದ್ದೇವು. ಅದೇ ದುಡ್ಡಿನಿಂದ ಮನೆಯ ಖರ್ಚನ್ನು ನೀಗಿಸುತ್ತಿದ್ದೇವು. ಈ ವ್ಯಾಪಾರದಿಂದ ಬಂದ ಆದಾಯದಲ್ಲಿ ಮನೆಯ ಖರ್ಚು ವೆಚ್ಚವನ್ನೆಲ್ಲ ನೀಗಿಸಿ ತಿಂಗಳ ಕೊನೆಯಲ್ಲಿ ನಮಗೆ ಯಾವುದೇ ಉಳಿತಾಯ ಆಗುತ್ತಿರಲಿಲ್ಲ. ನಮಗೆ ಒಟ್ಟು 8 1/2 ಗುಂಟೆ ಗದ್ದೆ ಪ್ರದೇಶವು ಪಿತ್ರಾರ್ಜಿತ ಆಸ್ತಿ ಆಗಿದ್ದು, ಇದೆಲ್ಲವು ಭಾಗಾಯತ ಪ್ರದೇಶವಾಗಿದೆ. ಸದ್ರಿ ಭಾಗಾಯತ ಪ್ರದೇಶದಿಂದ ವರ್ಷದಿಂದ ವರ್ಷಕ್ಕೆ ನಮಗೆ ವಿವಿಧ ರೀತಿಯ ಆದಾಯ ಬರುತ್ತದೆ. ನಾವು ಈ ಭಾಗಾಯತ ಪ್ರದೇಶದಿಂದ ಬಂದ ಆದಾಯದಿಂದ ಮತ್ತು ವ್ಯಾಪಾರದಿಂದ ಬಂದ ಆದಾಯದಿಂದ ಖರ್ಚು ವೆಚ್ಚವನ್ನು ನೀಗಿಸಿಕೊಂಡು ಹೋಗುತ್ತಿದ್ದೇವು. ಈ ಮೇಲೆ ಹೇಳಿದ ಆದಾಯವನ್ನು ಹೊರತುಪಡಿಸಿ ನಮಗೆ ಬೇರೆ ಯಾವುದೇ ಆದಾಯ ಇದ್ದು ಇರುವುದಿಲ್ಲ.

ಸರ್ವೇ ನಂಬರ್ 108 ಮತ್ತು 109 ಗದ್ದೆ ಪ್ರದೇಶವಾಗಿದೆ ಎಂದರೆ ಸರಿ , ಮತ್ತು ಸದರಿ ಪ್ರದೇಶವನ್ನು ನಮ್ಮ ತಂದೆಯವರು ಮಾರಾಟ ಮಾಡಿದ್ದು , ಅದರಲ್ಲಿ ಸ್ವಲ್ಪ ರಸ್ತೆಗೂ ಸಹ ಹೋಗಿರುತ್ತದೆ. ಸದ್ರಿ ಸ್ಥಳದಲ್ಲಿ ಸ್ವಲ್ಪ ಪ್ರದೇಶವು ರಸ್ತೆಗೆ ಹೋಗಿದ್ದರಿಂದ ನಮಗೆ ಹಣ ಬಂದಿದೆ. ದಾವಾ ಪರಿಶಿಷ್ಟದ ಜಂಜ್ರಾ ನಂಬರ್ 2 ರ ಸ್ವತ್ತನ್ನು ಖರೀದಿ ಮಾಡುವ ಮುನ್ನವೇ ಈ ಮೇಲಿನ ಸರ್ವೇ ನಂಬರ್ 108 ಮತ್ತು 109 ಪ್ರದೇಶಗಳನ್ನು ನಾವು ಮಾರಾಟ ಮಾಡಿದ್ದೇವೆ. ನಾವು ಸದ್ರಿ ಸ್ವತ್ತನ್ನು ಖರೀದಿಸಲಿಕ್ಕೆ ಈ ಮೇಲೆ ಮಾರಾಟ ಮಾಡಿದ ಪ್ರದೇಶದಿಂದ ಬಂದ ಹಣವನ್ನು ಉಪಯೋಗಿಸಿಕೊಂಡಿದ್ದೇವೆ ಎಂದು ಕೇಳಿದಾಗ, ಸಾಕ್ಷಿಯು ನಾವು ಸಾಲವನ್ನು ಮಾಡಿ ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಾವು ಅವಾಗ ಭೂ ಅಭಿವೃದ್ಧಿ ಬ್ಯಾಂಕನಿಂದ ನನ್ನ ತಂದೆಯ ಹೆಸರಿನಲ್ಲಿ ಸಾಲವನ್ನು ಪಡೆದಿದ್ದೇವು, ಆದರೆ ಅದು ಯಾವ ವರ್ಷ ಎಂದು ನನಗೆ ನೆನಪಿಲ್ಲ, ಮತ್ತು ಎಷ್ಟು ಸಾಲ ಎಂದು ನನಗೆ ನೆನಪಿಲ್ಲ. ನಾವು ಸಾಲವನ್ನು ಪಡೆದಿದ್ದರ ಬಗ್ಗೆ ದಾಖಲೆಗಳನ್ನು ತೆಗೆಸಿದ್ದರ ಬಗ್ಗೆ ನನಗೆ ಈಗ ನೆನಪಿಲ್ಲ. ಸದ್ರಿ ಸಾಲವನ್ನು ನಾನು ಮತ್ತು ನನ್ನ ತಂದೆ ಮರುಪಾವತಿ ಮಾಡಿದ್ದೇವೆ. ಸದ್ರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ , ಆದರೆ ಅವುಗಳು ಸಿಕ್ಕರೇ ಹಾಜರುಪಡಿಸುತ್ತೇನೆ. ಸರ್ವೇ ನಂಬರ್ 108 , ಮತ್ತು 109 ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಅದು ನಮ್ಮ ತಂದೆಯವರು ಗಣಪತಿ ಭಟ್ಟ ಬಡ್ತಿಮನೆ ಅವರಿಂದ

ಖರೀದಿ ಮಾಡಿದ ಆಸ್ತಿಯಾಗಿರುತ್ತದೆ. ಅದನ್ನು ಯಾವ ವರ್ಷ ಖರೀದಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ನನ್ನ ತಂದೆಯವರು ಸದರಿ ಸ್ವತ್ತುಗಳನ್ನು ಖರೀದಿ ಮಾಡಿದ್ದರ ಬಗ್ಗೆ ನಾನು ದಾಖಲೆಗಳನ್ನು ಹುಡುಕಿ ನೋಡಬೇಕು. ಸದ್ರಿ ಸ್ವತ್ತುಗಳನ್ನು ನಾನು ಅಂದಾಜು 1982-83 ನೇ ಸಾಲಿನಲ್ಲಿ ಮಾರಾಟ ಮಾಡಿರಬಹುದು. ಆ ಎರಡು ಸರ್ವೇ ನಂಬರಗಳ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು , ಅವುಗಳನ್ನು ಮಾರಾಟ ಮಾಡಿ ಸರ್ವೇ ನಂಬರ್ 58 ಹಿಸ್ಸಾ 4 ರ ಸ್ವತ್ತನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮಾರಾಟದಿಂದ ಬಂದ ಹಣವನ್ನು ನಮ್ಮ ತಂದೆಯವರು ತಮ್ಮ ವ್ಯವಹಾರಕ್ಕೆ ಬಳಸಿಕೊಂಡಿದ್ದರು. ಸರ್ವೇ ನಂಬರ್ 58 ಹಿಸ್ಸಾ 4 ರ ಸ್ವತ್ತು ಪಿತ್ರಾರ್ಜಿತ ಆಸ್ತಿ ಆಗಿದ್ದು , ನಾವು ಸ್ವಯಾರ್ಜಿತ ಆಸ್ತಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 58 ಹಿಸ್ಸಾ 4 ರ ಕ್ರಯ ಪತ್ರವನ್ನು ಮಾಡುವಾಗ ಅದರಲ್ಲಿ ಪ್ರತಿಫಲದ ಹಣವನ್ನು ಈ ಮೊದಲೇ ನನ್ನ ತಂದೆಯವರು ಮಾರಾಟಗಾರರಿಗೆ ನೀಡಲಾಗಿದೆ ಎಂದು ನಮೂದಿಸಿದ್ದಾರೆ ಎಂದರೆ ಹೌದು. ನನ್ನ ಹೆಸರಿಗೆ ಕ್ರಯ ದಸ್ತಾವೇಜನ್ನು ಮಾತ್ರ ಮಾಡಿದ್ದು , ನನ್ನ ತಂದೆಯವರು ಅದಕ್ಕೆ ಹಣವನ್ನು ನೀಡಿರುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.